ಸಂಖ್ಯೆ: ಮಂ.ವಿ./ಪ.ವಿ./ಬಾವಾ/ಸಿ ಆರ್14/2023–24/ಇ.6 ದಿನಾಂಕ **27.06.2023**

# ಅಧಿಸೂಚನೆ

**ವಿಷಯ:** ಖಾಸಗಿ ಲಘು ವಾಹನಗಳ ಬಾಡಿಗೆ ದರಪಟ್ಟಿ (ಕೊಟೇಶನ್) ಒದಗಿಸುವ ಬಗ್ಗೆ.

------

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 2023–24ರಲ್ಲಿ ನಡೆಯುವ ಪರೀಕ್ಷಾ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ, ದ.ಕ., ಉಡುಪಿ ಹಾಗೂ ಕೊಡಗು ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಿಗೆ ಸಂಚರಿಸಲು ಹಾಗೂ ಪರೀಕ್ಷಾ ಸಾಮಾಗ್ರಿಗಳನ್ನು ಕಾಲೇಜುಗಳಿಗೆ ಮತ್ತು ಕಾಲೇಜುಗಳಿಂದ ವಿಶ್ವವಿದ್ಯಾನಿಲಯಕ್ಕೆ ಸಾಗಿಸಲು ಖಾಸಗಿ ಬಾಡಿಗೆ ವಾಹನಗಳನ್ನು ಒದಗಿಸಲು ಅಧಿಕೃತ ಟ್ರಾವೆಲ್ಸ್ ಏಜೆನ್ಸಿಗಳಿಂದ **31.12.2024**ರ ಅವಧಿಯವರೆಗೆ ಊರ್ಜಿತದಲ್ಲಿರುವಂತೆ ಲಗತ್ತಿಸಲಾದ ನಮೂನೆಯಲ್ಲಿ ಮಾತ್ರ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಸದರಿ ದರಪಟ್ಟಿಯನ್ನು ಮೊಹರು ಮಾಡಿದ ಲಕೋಟೆಯಲ್ಲಿ **"ಬಾಡಿಗೆ ವಾಹನಗಳಿಗೆ ದರಪಟ್ಟಿ"** ಎಂದು ಕಡ್ಡಾಯವಾಗಿ ನಮೂದಿಸಿ ದಿನಾಂಕ **15.07.2023** ರೊಳಗೆ ಈ ಕಛೇರಿಗೆ ತಲುಪುವಂತೆ ಕಳುಹಿಸತಕ್ಕದ್ದು.

**RATE LIST**

| Sl. No. | Category | Scorpio/Bolero TATA Sumo/Grande/Innova | |
|---|---|---|---|
| | | A.C. | Non A.C. |
| 1. | Rate per running K.M. (Long Trips) | | |
| 2. | Minimum per day (for Short Trips)<br>i) Minimum rate<br>ii) Minimum K.M. | | |
| 3. | Night Waiting Charges (in case of night halts only) | | |

**ಷರತ್ತುಗಳು:**

1) ದರಪಟ್ಟಿಯಲ್ಲಿ ಸೂಚಿಸಿದ ದರಗಳು ದಿನಾಂಕ 31.12.2024ರ ವರೆಗೆ ಊರ್ಜಿತದಲ್ಲಿರತಕ್ಕದ್ದು.
2) ದರಗಳು ಎಲ್ಲಾ ರೀತಿಯ ತೆರಿಗೆ ಹಾಗೂ ವೆಚ್ಚಗಳು ಸೇರಿ ಇರತಕ್ಕದ್ದು.
3) ದರಪಟ್ಟಿಯ ಅವಧಿಯು ಚಾಲ್ತಿಯಲ್ಲಿರುವಾಗ ಯಾವುದೇ ಸಂದರ್ಭದಲ್ಲಿ ಕನಿಷ್ಠ ದರದ ಆಧಾರದಲ್ಲಿ ಅಂಗೀಕರಿಸಿರುವ ವಾಹನಗಳನ್ನು ನಿಗದಿತ ದಿನಾಂಕ ಹಾಗೂ ಸಮಯಕ್ಕೆ ಕೇಳಲಾಗುವ ಸಂಖ್ಯೆಯಲ್ಲಿ ಸರಿಯಾಗಿ ಒದಗಿಸತಕ್ಕದ್ದು.
4) ವಾಹನಗಳು ಹೊರಡುವ ಸ್ಥಳ ಮಂಗಳೂರು ವಿಶ್ವವಿದ್ಯಾನಿಲಯ ಕಛೇರಿ, ಮಂಗಳಗಂಗೋತ್ರಿ ಅಥವಾ ವಿಶ್ವವಿದ್ಯಾನಿಲಯವು ಸೂಚಿಸುವ ಕೇಂದ್ರವಾಗಿದ್ದು, ಟ್ರಾವೆಲ್ ಏಜನ್ಸಿಯ ಕಛೇರಿಯಿಂದ ವಿಶ್ವವಿದ್ಯಾನಿಲಯ ಕಛೇರಿ, ಮಂಗಳಗಂಗೋತ್ರಿ/ ಸೂಚಿತ ಸ್ಥಳ ಮತ್ತು ಮಂಗಳಗಂಗೋತ್ರಿ/ಸೂಚಿತ ಸ್ಥಳದಿಂದ ಟ್ರಾವೆಲ್ ಏಜನ್ಸಿ ಕಛೇರಿಯವರೆಗಿನ ದೂರ ಮಾತ್ರ ಹೆಚ್ಚುವರಿ ಮೈಲೇಜ್ ನೀಡಲಾಗುವುದು.
5) ಪ್ರಯಾಣದ ಆರಂಭದ ಹಾಗೂ ಕೊನೆಯ ಮೀಟರ್ ರೀಡಿಂಗ್ ದಾಖಲಿಸಿ ವಾಹನದ ಚಾಲಕ ಹಾಗೂ ಕರ್ತವ್ಯದಲ್ಲಿರುವ ಅಧಿಕಾರಿ/ ಸಿಬ್ಬಂದಿಯ ಹೆಸರು ಮತ್ತು ರುಜು, ವಾಹನದ ನೋಂದಣಿ ಸಂಖ್ಯೆ, ಕ್ರಮಿಸಿದ ದಿನಾಂಕ, ಒಟ್ಟು ಮೈಲೇಜ್, ಇತ್ಯಾದಿ ವಿವರಗಳಿರುವ ಟ್ರಾವೆಲ್ ಏಜನ್ಸಿಯವರ ಅಧಿಕೃತ ಶಿರೋನಾಮೆಯಿರುವ ರಶೀದಿಯ ಒಂದು ಪ್ರತಿಯನ್ನು ಪ್ರಯಾಣಿಸಿದ ಅಧಿಕಾರಿ/ಸಿಬ್ಬಂದಿಗೆ ನೀಡಿ ಮತ್ತೊಂದು ಪ್ರತಿಯನ್ನು ಬಿಲ್ಲಿನೊಂದಿಗೆ ಲಗತ್ತಿಸತಕ್ಕದ್ದು.
6) ವಾಹನಗಳನ್ನು ನಿರ್ಧಿಷ್ಟಪಡಿಸಿದ ಸ್ಥಳಗಳಿಗೆ ಮಾತ್ರ ಕಛೇರಿ ಮಾರ್ಗದರ್ಶನದಂತೆ ಚಲಿಸತಕ್ಕದ್ದು. ಸೂಚಿಸಿದ ಮಾರ್ಗಗಳ ಹೊರತಾಗಿ ಹೆಚ್ಚುವರಿಯಾಗಿ ವಾಹನ ಕ್ರಮಿಸಿದಲ್ಲಿ ಹೆಚ್ಚುವರಿ ಮೈಲೇಜ್ ಬಿಲ್ಲಿನಿಂದ ಕಡಿತಗೊಳಿಸಲಾಗುವುದು.
7) ಕೇಂದ್ರ ಸ್ಥಾನದಿಂದ ಹೊರಗೆ ರಾತ್ರಿ ತಂಗುವಿಕೆ ಇದ್ದಲ್ಲಿ ರಾತ್ರಿ ತಂಗುವಿಕೆ ವೆಚ್ಚ ಹಾಗೂ ಮರುದಿನ ರಜಾ ದಿನವಾಗಿದ್ದಲ್ಲಿ ಒಂದು ಹೆಚ್ಚುವರಿ ತಂಗುವಿಕೆ night halt ನೀಡಲಾಗುವುದು.
8) ಪ್ರಯಾಣದ ದಿನದಂದು ಕೇಂದ್ರ ಸ್ಥಾನಕ್ಕೆ ಹಿಂತಿರುಗುವಾಗ ತಡರಾತ್ರಿಯಾಗಿದ್ದು, ಪ್ರಯಾಣಿಸಿದ ಅವಧಿಯು 12 ಗಂಟೆಗಳಿಗೆ ಮೀರಿದ ಸಂದರ್ಭದಲ್ಲಿ ಒಂದು ತಂಗುವಿಕೆ ಭತ್ಯೆಯನ್ನು ಪರಿಗಣಿಸಲಾಗುವುದು.

9) ಪೂರ್ಣ ವಿವರಗಳಿಲ್ಲದ ಅಸಂಪೂರ್ಣ ಮತ್ತು ಷರತ್ತುಬದ್ಧ (conditional) ದರಪಟ್ಟಿಗಳನ್ನು ಸ್ವೀಕರಿಸಲಾಗುವುದಿಲ್ಲ.
10) ಯಾವುದೇ ಅಥವಾ ಎಲ್ಲಾ ದರಪಟ್ಟಿಗಳನ್ನು ಸ್ವೀಕರಿಸುವುದು, ತಿರಸ್ಕರಿಸುವುದು ಕೆಳಗೆ ಸಹಿ ಮಾಡಿದವರ ಆಧೀನಕ್ಕೊಳಪಟ್ಟಿರುತ್ತದೆ.
11) ಪ್ರಯಾಣ ವಿವರಗಳನ್ನು ಗೌಪ್ಯತೆಯನ್ನು ಕಾಪಾಡುವುದು ಹಾಗೂ ನಿಗದಿತ ಸಮಯವನ್ನು ಕಾಪಾಡುವುದು.

**Sd**
**ಕುಲಸಚಿವರು (ಪರೀಕ್ಷಾಂಗ)**

ಪ್ರತಿ:

Co-Ordinator DUIMS, Computer Centre Mangalore University – ಅಧಿಸೂಚನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟಲ್ಲಿ ಪ್ರಕಟಿಸಲು ಕೋರಲಾಗಿದೆ.